ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಅ(ಚಾ.ಪೇ)ಪಿಆರ್/08 /12-13

ಕಾರ್ಯಪಾಲಕ ಅಭಿಯಂತರರವರ ಕಛೇರಿ
ಚಾಮರಾಜಪೇಟೆ ವಿಭಾಗ,
ಬಿ.ಬಿ.ಎಂ.ಪಿ.ವಾಣಿಜ್ಯ ಸಂಕೀರ್ಣ,
ಜೆ.ಸಿ. ರಸ್ತೆ, 2ನೇ ಮಹಡಿ,
ಬೆಂಗಳೂರು-02, ದಿನಾಂಕ: 24/01/2013

## ಕಾರ್ಯದೇಶ

ವಿಷಯ:- ಚಾಮರಾಜಪೇಟೆ ಉಪವಿಭಾಗದ ವಾರ್ಡ್ ಸಂಖ್ಯೆ: 139/ಎ & ಡಿ ಪ್ರದೇಶಗಳಲ್ಲಿ ಶೇಖರಣೆಯಾಗುವ ಕಸ ಸಾಗಾಣಿಕೆಯ ಕಾಮಗಾರಿಯನ್ನು ದಿನ ಬಾಡಿಗೆಯ ಆಧಾರದ ಮೇಲೆ ನಿಯೋಜಿಸಿಕೊಂಡಿರುವ ಸ್ಥಿರೀಕರಿಸಿ ಅನುಮೋದಿಸುವ ಬಗ್ಗೆ.

ಉಲ್ಲೇಖ:- 1)ಮಾನ್ಯ ನಗರ ಪಾಲಿಕೆ ಸದಸ್ಯರ ಪತ್ರ ದಿನಾಂಕ: 15/11/2012, 16/08/2012 & 22-12-2012

2)ಜಂಟಿ ಆಯುಕ್ತರು (ಪಶ್ಚಿಮ) ರವರ ವರದಿ ಸಂಖ್ಯೆ:ಪಿ.ಆರ್/8119/12-13, ದಿ: 05-01-2013

3)ಅಪರ ಆಯುಕ್ತರು(ಪಶ್ಚಿಮ)/ಪಿಆರ್/426/12-13, ದಿನಾಂಕ:09-10-2012.

******

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಚಾಮರಾಜಪೇಟೆ) ಉಪವಿಭಾಗದ ವಾರ್ಡ್ ಸಂಖ್ಯೆ: 139/ಎ & ಡಿ ಪ್ರದೇಶಗಳಲ್ಲಿ ಶೇಖರಣೆಯಾಗುವ ಕಸವನ್ನು ಸಾಗಿಸಲು ದಿನ ಬಾಡಿಗೆಯ ಆಧಾರದ ಮೇಲೆ ಗುತ್ತಿಗೆದಾರರಾದ ಶ್ರೀ ನರಸಿಂಹಮೂರ್ತಿ ಹಾಗೂ ಅಭಿಲಾಷ್ ರವರ ಲಾರಿ ಸಂಖ್ಯೆ: AP-09 U 4086 & GDS- 6138 ಈ ವಾಹನವನ್ನು ದಿನಾಂಕ: 24/10/2011 ರಿಂದ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಲಾಗಿದ್ದು, ಸದರಿ ಲಾರಿಗಳು ಸಮರ್ಪಕವಾಗಿ ಘನ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿಲ್ಲವೆಂದು ಹಲವಾರು ದೂರುಗಳು ಬಂದಿರುವ ಮೇರೆಗೆ ಉಲ್ಲೇಖ (1) ರಲ್ಲಿ ಮಾನ್ಯ ನಗರ ಪಾಲಿಕೆ ಸದಸ್ಯರು ತಿಳಿಸಿರುತ್ತಾರೆ.

ಆದ್ದರಿಂದ ಕಸ ವಿಲೇವಾರಿಯ ಗುತ್ತಿಗೆದಾರರನ್ನು ಕೂಡಲೇ ರದ್ದುಗೊಳಿಸಿ ದಿನಾಂಕ: **22-12-2012** ರಿಂದ ಶ್ರೀ. ಮಂಜುನಾಥ್ ರವರ ಲಾರಿಯ ಸಂಖ್ಯೆ: OR-06 C 4067 & KA-35 4577(ನಕಲನ್ನು)ವಾಹನವನ್ನು ಕಸ ಸಾಗಿಸಲು ನಿಯೋಜಿಸಿಕೊಂಡಿರುವುದಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಚಾಮರಾಜಪೇಟೆ) ವಲಯದವರು ವರದಿ ಮಾಡಿರುತ್ತಾರೆ.

ಈ ಕೆಳಕಂಡ ಷರತ್ತುಗಳನ್ನೊಳಪಡಿಸಿ OR-06 C 4067 & KA-35 4577 ಗುತ್ತಿಗೆ ವಾಹನವನ್ನು 139/ಎ & ಡಿ ವಾರ್ಡಿನಲ್ಲಿ ದಿನ ಬಾಡಿಗೆಯ ಆಧಾರದ ಮೇಲೆ ಉಲ್ಲೇಖ(3)ರಲ್ಲಿನ ಅಪರ ಆಯುಕ್ತರು(ಪಶ್ಚಿಮ)ರವರ ಆದೇಶದಂತೆ ಕಾರ್ಯನಿರ್ವಹಿಸಲು ಸೂಚಿಸಿದೆ.

### ಷರತ್ತುಗಳು

1. ನಿಯೋಜಿತ ಗುತ್ತಿಗೆದಾರರು ಸಂಬಂಧಪಟ್ಟ ವಾರ್ಡಿನಲ್ಲಿರುವ ಎಲ್ಲಾ ಕಸದ ತೊಟ್ಟಿಗಳಿಂದ ನಿಗಧಿತ ಸ್ಥಳದಲ್ಲಿ ಶೇಖರಣೆಯಾಗುವ ಸಂಪೂರ್ಣ ಕಸವನ್ನು ಪ್ರತಿ ದಿನ ಸಾಗಾಣಿಕೆ ಮಾಡಬೇಕು.
2. ಕಸ ಸಾಗಾಣಿಕೆಯಾಗುವ ಪ್ರಕರಣಗಳ ಪ್ರತಿ ಒಂದು ತೊಟ್ಟಿಗೆ ದಿನಕ್ಕೆ ರೂ. 25-00 ರಂತೆ ದಂಡದ ರೂಪದಲ್ಲಿ ಗುತ್ತಿಗೆದಾರರ ಮಾಸಿಕ ಬಿಲ್ಲಿನಲ್ಲಿ ಕಟಾಯಿಸಲಾಗುವುದು.
3. ನಿಯೋಜಿತ ಲಾರಿಗೆ ಕಸ ತುಂಬುವ ಭಾಗಕ್ಕೆ ಮೆಷ್ ಅಳವಡಿಸಿ, ಈ ಮೆಷ್ ಮೇಲೆ ಟಾರ್ಪಾಲನ್ನು ಒದಗಿಸಲು ಈ ಮೂಲಕ ಸೂಚಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು
ಚಾಮರಾಜಪೇಟೆ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ:201
ಶ್ರೀ.ಮಂಜುನಾಥ,
**# 99, ಕ್ಯಾಲಸನಹಳ್ಳಿ,**
**ಕೊತ್ನೂರು ಅಂಚೆ, ಕೆ.ಆರ್.ಪುರಂ,**
**ಬೆಂಗಳೂರು-77**

**ಪ್ರತಿಯನ್ನು:-**

1. ಸಹಾಯಕ ನಿಯಂತ್ರಕರು ಹಣಕಾಸು (ಪಶ್ಚಿಮ) ರವರಿಗೆ ಕಳುಹಿಸಿದೆ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು (ಚಾಮರಾಜಪೇಟೆ)ಉಪ ವಿಭಾಗ ರವರಿಗೆ ಕಳುಹಿಸಿದೆ.
3. ಗುತ್ತಿಗೆದಾರರಿಗೆ/ ಕಛೇರಿ ಕಡತಕ್ಕೆ